

ಕಾರ್ಲಿ ಸಿಗರೇಟೊಂದನ್ನು ತೆಗೆದು ಸೇದಿದ. ತಾನು ಅಲ್ಲಿ ಕುಳಿತಿದ್ದುದನ್ನು ಯಾರೂ ಗಮನಿಸಿರಲಿಲ್ಲ. ಅದು ಈಗ ಪರಾಕಾಷ್ಠೆಯ ವಿರೋಧಿಯಾಗುವುದರಲ್ಲಿತ್ತು. ಜಗತ್ತು ಎಂದಿನಂತೆಯೇ ತನ್ನ ಬೇಸರ ತರಿಸುವ ರೀತಿಯಲ್ಲೇ ಸಾಗುತ್ತಿತ್ತು. ಕಾರ್ಲಿ ಈಗ ಜಯಶೀಲ ಎಂದು ಯಾವ ಧ್ವನಿಯೂ ಗಟ್ಟಿಯಾಗಿ ಕೂಗಲಿಲ್ಲ. ಅವನು ಮಾತ್ರ ಜನಸಂದಣಿಯ ನಿಲ್ದಾಣದಲ್ಲಿರುವ ಬೆಂಚಿನ ಮೇಲೆ ಸಿಗರೇಟು ಸೇದುತ್ತಾ ಕುಳಿತ ಸಾಮಾನ್ಯ ಮನುಷ್ಯನಾಗಿದ್ದ. ಅಥವಾ ಅದು ಅವನ ಜಯವೇ, ಅವನೊಬ್ಬ ಸಾಧಾರಣ ಮನುಷ್ಯನಾಗಿರುವುದಕ್ಕೆ? ಒಳ್ಳೆಯ ಉಡುಪು ಧರಿಸಿದ ಓರ್ವ ಬಿಳಿಯ ಮಹಿಳೆ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದಳು. ಅವಳೀಗ ಬೆಂಚಿನ ಮೇಲೆ ಕುಳಿತುಕೊಳ್ಳುವಳೇ? ಕಾರ್ಲಿ ಆಶ್ಚರ್ಯಗೊಂಡ. ಮತ್ತೆ, ಅದೇ ಬೇಸರದ ಧ್ವನಿ, “ನೀನು ಎದ್ದು ಆ ಬಿಳಿ ಹೆಂಗಸಿಗೆ ಜಾಗ ಮಾಡಿಕೊಡಬೇಕು.” ಕಾರ್ಲಿ ತನ್ನ ಕಣ್ಣುಗಳನ್ನು ಮುಚ್ಚಿ ಸಿಗರೇಟಿನ ಹೊಗೆಯನ್ನು ಗಟ್ಟಿಯಾಗಿ ಎಳೆದುಕೊಂಡ. ಅವಳು ಅವನ ಹಿಂದೆ ಅತ್ತಿತ್ತ ರೈಲ್ವೇ ಪ್ಲಾಟ್‌ಫಾರಂನಲ್ಲಿ ಓಡಾಡುತ್ತಲೇ ಇದ್ದಳು. ಅವಳಿಗೂ ಸಹ ಸವಾಲು ಹಾಕಲು ಭಯವಾಗಿ – ಮಾನವನಾಗುವ ಹಕ್ಕಿಗೆ ಸವಾಲು ಹಾಕುವ ಬಗ್ಗೆ? ಕಾರ್ಲಿ ಆಯಾಸಗೊಂಡ. ಮೂರನೆಯ ಸಂಘರ್ಷಕರ ವಿಚಾರ ಅವನ ಮನಸ್ಸಲ್ಲಿ ನುಸುಳಿತು. ಒಂದು ಪರಿಹಾರೋಪಾಯ ವಿಚಾರ, ‘ನೀನು ಆಯಾಸಗೊಂಡಿರುವುದರಿಂದ ಈ ಬೆಂಚಿನ ಮೇಲೆ ಕುಳಿತಿದ್ದೀಯೆ. ಆಯಾಸವಾಗಿದ್ದರೆ ಕುಳಿತುಕೊ.’ ಅವನಿಗೆ ಆಯಾಸವಾಗಿದ್ದರಿಂದ ಬೇರೆ ಕಡೆ ಚಲಿಸುತ್ತಿರಲಿಲ್ಲ. ಅಥವಾ ತನಗಿಷ್ಟ ಬಂದ ಕಡೆ ಅವನು ಕುಳಿತುಕೊಂಡಿದ್ದನೇ?...

“ಎದ್ದೇಳು ಇಲ್ಲಿಂದ!”

ಕಾರ್ಲಿ ಆ ಗೊಗ್ಗರು ಧ್ವನಿಯನ್ನು ಕೇಳಿಸಿಕೊಳ್ಳಲಿಲ್ಲ...

“ನಾನ್ ಹೇಳ್ತಿದ್ದೀನಿ ಇಲ್ಲಿಂದ ಮೊದಲು ಎದ್ದೇಳು. ಏ ಹಂದಿ!” ಕಾರ್ಲಿ ತಕ್ಷಣವೇ ವಾಸ್ತವ ಪ್ರಪಂಚಕ್ಕೆ ಹಿಂತಿರುಗಿದ. ಒಂದು ಕ್ಷಣ ಅವನು ಎದ್ದೇಳಲು ಬಯಸಿದ. ಆದರೆ, ನೆನಪಿಸಿಕೊಂಡ ತಾನು ಏಕೆ ಅಲ್ಲಿ ಕುಳಿತುಕೊಂಡೆ ಎಂಬುದನ್ನು. ಅವನಿಗೆ ಸಾಕಷ್ಟು ಆಯಾಸವಾಗಿತ್ತು. ಅವನು ನಿಧಾನವಾಗಿ ಕೆಂಪುಮೂತಿ ಮಾಡಿಕೊಂಡು ಅವನ ಕಡೆ ದುರುಗುಟ್ಟಿ ನೋಡಿದ.

“ಎದ್ದೇಳು! ನಿನಗೋಸ್ಕರ ಆ ಕಡೆ ಬೆಂಚುಗಳಿವೆ.”

ಕಾರ್ಲಿ ಮುಂದಕ್ಕೆ ನೋಡಿದ, ಏನೂ ಹೇಳದೆ. ಅವನಿಗೆ ಕಾಣಿಸಿದ್ದು ಒಂದು ಜೊತೆ ತೀಕ್ಷ್ಣವಾದ ತಣ್ಣನೆಯ ಕಣ್ಣುಗಳು.